ಎಲ್ಲರಿಗೂ ತಮ್ಮ ತಮ್ಮ ಬಾಲ್ಯ ವಿಶೇಷ ಮತ್ತು ಚೆಂದ ಅಂತಲೇ ಅನಿಸುತ್ತದೇನೋ.

ಒಮ್ಮೆ ನಾವು ಚಿಕ್ಕವರಿದ್ದಾಗ ನಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆಂದು ನಿರ್ಮಲಾ ಮಿಸ್ ನಮಗೆಲ್ಲಾ 'ಝುಮ್ಮಕ ಝುಮ್ಮಕ ಝುಮ್ಮಕ ಬೋಲಾ ಝುಮ್ಮಕ ಝುಮ್ಮಕ ಝುಮ್ಮಕ ಹೋಯ್...' ಎನ್ನುವ ಸಿನಿಮಾ ಒಂದರ ಕಾಡು ಜನರ ಹಾಡಿಗೆ ನೃತ್ಯ ಸಂಯೋಜಿಸಿ ಹೇಳಿಕೊಟ್ಟಿದ್ದರು. ಅದಕ್ಕಾಗಿ ಕಾಡು ಜನರ ಉಡುಪು, ಆಭರಣಗಳನ್ನು ಸಂಗ್ರಹಿಸಲು ಹೇಳಿದ್ದರು. ಅದನ್ನು ನಾಡಿನೆಲ್ಲೆಡೆ ನಾವೆಲ್ಲಾ ಬೆದಕಿ ಸುಸ್ತಾಗಿದ್ದೆವು. ಸುತ್ತಮುತ್ತಲೆಲ್ಲೂ ಹತ್ತಿರದಲ್ಲಿ ಗಿರಿಜನರ ಹಾಡಿಗಳೂ ಇರಲಿಲ್ಲ. ನಂತರ ನಾವೇ ಅವುಗಳನ್ನು ಹೋಲುವ ಕೃತಕ ಆಭರಣಗಳನ್ನು ಮಾಡಿಸಿಕೊಳ್ಳಬೇಕಾಯಿತು. ಗಿರಿಜನರು ಹಣೆಗೆ ಪಟ್ಟಿ ಕಟ್ಟಿಕೊಳ್ಳುವಂತೆ, ಕಟ್ಟಿಕೊಳ್ಳಲಿಕ್ಕಾಗಿ ನಮ್ಮ ಶಿಕ್ಷಕಿಯೊಬ್ಬರು ಬಾಸಿಂಗದ ಬೊಟ್ಟುಗಳಂಥಾ ಹಣೆಪಟ್ಟಿಗಳನ್ನು ತಯಾರಿಸಿ ತಂದಿದ್ದರು. ಅದರ ನಡುವೆ ತುರಾಯಿಯಂತೆ ಚುಚ್ಚಿಕೊಳ್ಳಲು ಒಂದಷ್ಟು ಕೋಳಿಪುಚ್ಛಗಳನ್ನು ತರಲು ನಮಗೆ ಹೇಳಿದರು. ಸರಿಯಾಯ್ತು... ನಮ್ಮದೊಂದು ಗ್ಯಾಂಗ್ ಇತ್ತಲ್ಲ... ಅವರಲ್ಲಿ ಕೆಲವರು ಮಾಂಸಹಾರಿಗಳೂ ಇದ್ದರು. ಅವರಲ್ಲಿ ಕೆಲವರಿಗೆ 'ಚಿಕನ್ ತಿನ್ನಲು ಆಸೆಯಾಗಿದೆ...' ಎಂದು ಮನೆಯಲ್ಲಿ ಹೇಳಿ... ಕೋಳಿ ತರಿಸಿಕೊಳ್ಳಲು, ಕೊಯ್ದಾಗ ಸಿಗುವ ಅದರ ಪುಚ್ಛಗಳನ್ನು ತರಲು ಹೇಳಿದೆವು. ನಮ್ಮ ಉಪಾಯಗಳೆಲ್ಲಾ ಎಷ್ಟು ಬಾಲಿಶವಾಗಿದ್ದವೆಂದರೆ ಅವೆಲ್ಲ ವರ್ಕ್ ಆಗಲಿಲ್ಲ. ಕೊನೆಗೆ ಪುಚ್ಛಗಳಿಗಾಗಿ ಬೀದಿಗಿಳಿದಿದ್ದೆವು. ಯಾರ್‍ಯಾರು ಕೋಳಿ ಸಾಕಿದ್ದಾರೆ ಎಂದು ಸಂಶೋಧನೆ ಮಾಡಿ ಅವರು ಇಲ್ಲದಿರುವ ಸಮಯ ಸಾಧಿಸಿ ಬೇಲಿ ಹಾರಿ ಅವರ ಹಿತ್ತಲನ್ನೆಲ್ಲಾ ತಡಕಾಡಿ ನಮ್ಮ ತಂಡಕ್ಕೆ ಬೇಕಾಗುವಷ್ಟು ಪುಚ್ಛಗಳನ್ನು ಹೆಕ್ಕಿ ತಂದಿದ್ದೆವು. ಕೆಂಪಗೆ, ಕಪ್ಪಗೆ, ನವಿಲು ಹಸಿರು, ಕಂದು, ಬಿಳಿ ಅಂತೆಲ್ಲಾ ತರಹೇವಾರಿ ಬಣ್ಣ ಬಣ್ಣದ ಗರಿಗಳನ್ನೆಲ್ಲಾ ಸಂಗ್ರಹಿಸಿಕೊಂಡು ಬಂದು ಪುಚ್ಛ ಸಿಕ್ಕ ಖುಷಿಯಲ್ಲಿ ಹಿರಿ ಹಿರಿ ಹಿಗ್ಗಿದ್ದೆವು. ಸಿಕ್ಕಿಸಿಕೊಂಡು ವೇದಿಕೆಯಲ್ಲಿ ಕುಣಿವಾಗ ನಮ್ಮ ಕಷ್ಟಗಳು, ಸವಾಲುಗಳು ಗೆಜ್ಜೆ ಸದ್ದಲ್ಲಿ ಮಾಯವಾಗಿದ್ದವು.

ಮತ್ತೊಮ್ಮೆ ನಾನಾಗ ಎಂಟನೇ ತರಗತಿಯಲ್ಲಿದ್ದಿರಬೇಕು. ಜೀವಶಾಸ್ತ್ರದ ಮೇಷ್ಟ್ರು ಪಕ್ಷಿಗಳ ಬಗ್ಗೆ ಸವಿಸ್ತಾರ ಪಾಠ ಮಾಡುತ್ತಾ 'ಹಕ್ಕಿಗಳಿಗೆ ಹಾರಲು ಸಹಾಯ ಮಾಡುವ ಅಂಗವೇ ರೆಕ್ಕೆಗಳು, ಇಬ್ಬದಿಯ ರೆಕ್ಕೆಗಳಲ್ಲೂ ಅಸಂಖ್ಯಾತ ಪುಚ್ಛಗಳಿರುತ್ತವೆ. ಈ ಪುಚ್ಛಗಳೂ ದಿನಂಪ್ರತಿ ನಮ್ಮ ಕೂದಲಿನಂತೆ ಉದುರುತ್ತವೆ, ಮತ್ತೆ ಹೊಚ್ಚ ಹೊಸ ಪುಚ್ಛಗಳು ಹುಟ್ಟುತ್ತವೆ. ಈ ಪುಚ್ಛಗಳ ಮೇಲೆ ಮೇಣದಂತಹ ವಸ್ತು ಹರಡಿಕೊಂಡಿರುತ್ತದೆ. ಆದಕಾರಣ ಅದು ಮಳೆಗೆ ತೊಯ್ಯುವುದೂ ಇಲ್ಲ, ಬಿಸಿಲಿಗೆ ಒಣಗುವುದೂ ಇಲ್ಲ. ರೆಕ್ಕಗಳು ಬಹಳ ಹಗುರ, ಮುಟ್ಟಲು ಮಧುರ, ತಾಕಲು ಸುಮಧುರ...' ಎಂದೆಲ್ಲಾ ಹೇಳಿ ಹಕ್ಕಿಪುಚ್ಛಗಳ ವೈವಿಧ್ಯಮಯ ಲೋಕವನ್ನು ಪರಿಚಯಿಸಿ ನಮ್ಮಲ್ಲಿ ಕುತೂಹಲದ ಸಸಿ ನೆಟ್ಟಿದ್ದರು. ಅದು ಹೆಮ್ಮರವಾಗುವ ಕನಸು ಕಾಣುತ್ತಿತ್ತು. ಮುಂದಿನ ವಾರದ ಹೊತ್ತಿಗೆ ವಿವಿಧ ಬಗೆಯ ಹಕ್ಕಿಪುಚ್ಛಗಳನ್ನು ಸಂಗ್ರಹಿಸಿ, ಪುಸ್ತಕವೊಂದರಲ್ಲಿ ಅಂಟಿಸಿಕೊಂಡು ಅದು ಯಾವ ಹಕ್ಕಿಯದ್ದು ಎಂದು ಪತ್ತೆಹಚ್ಚಿ, ಹೆಸರು ಬರೆದುಕೊಂಡು ಬರಲು ಮೇಷ್ಟ್ರು ತಿಳಿಸಿದರು. ಅಂದಿನಿಂದ ಒಂದು ವಾರ ಹಾದಿ, ಬೀದಿ, ಗಲ್ಲಿ, ಕೊಚ್ಚೆ, ಗುಂಡಿ, ಸಂದಿ, ಗೊಂದಿ, ತಿಪ್ಪೆಗಳನ್ನೆಲ್ಲಾ ಬೆದಕಿ ಕಾಗೆ, ಗುಬ್ಬಿ, ಕೋಳಿ, ಗಿಳಿ ಪುಚ್ಛಗಳನ್ನೆಲ್ಲಾ ಆಯ್ದದ್ದಾಯಿತು. ಮತ್ತೆ ಮತ್ತೆ ಬೇರೆ ಬೇರೆ ಪುಚ್ಛಗಳಿಗಾಗಿ ಹುಡುಕಿದಾಗಲೆಲ್ಲಾ ಅವವೇ ಪುಚ್ಛಗಳು ಮತ್ತೆ ಮತ್ತೆ ಎಡತಾಕಿದವು. ಒಂದಷ್ಟು ನವಿಲುಗರಿಗಳನ್ನು ಇದ್ದವರ ಬಳಿ ಕೇಳಿ ಎರವಲು ಪಡೆದೆ. ಒಂದು ನವಿಲುಗರಿಯನ್ನು ಮರಿಹಾಕುತ್ತದೆಂದು ಹೇಳಿ ಕನ್ನಡ ಪುಸ್ತಕದ